ಅಸಲು ದಾವಾ ಸಂಖ್ಯೆ .151-2015

ಪಿ.ಡಬ್ಲ್ಯೂ-1

ದಿಃ 03-01-2020

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಪ್ರತಿ ವಾದಿ ಪರ ವಕೀಲರಿಂದ ಃ-

ನನ್ನ ತಾಯಿಯವರು ದಾವಾ ಸ್ವತ್ತನ್ನು ನರಸಿಂಹಪ್ಪ ಮೇಷ್ಟ್ರು ಎಂಬುವವರಿಗೆ ಖರೀದಿಸಿದ್ದಾರೆ . ನರಸಿಂಹಪ್ಪ ಮೇಷ್ಟ್ರುಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನ್ಯಾಯಾಲಯಕ್ಕೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾಯಿಗೆ ನರಸಿಂಹಪ್ಪ ಮೇಷ್ಟ್ರು ಮಾರಾಟ ಮಾಡಿದ್ದಾರೆ ಎಂದು ಹೇಳುವಂತಹ ಸ್ವತ್ತು ಮಾರಾಟ ಮಾಡಿದಂತಹ ಕಾಲದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆಸ್ತಿಯು ನರಸಿಂಹಪ್ಪ ಮೇಷ್ಟ್ರುರ ಹೆಸರಿನಲ್ಲಿ ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ ನನ್ನ ತಾಯಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ದಿಃ 22-06-2015 ನಾವು ವಾಸವಿದ್ದಾಗ ತೊಂದರೆ ಕೊಟ್ಟ ನಾವು ಈ ದಾವೆಯನ್ನು ಹಾಕಿದ್ದೇನೆ .ದಾವಾ ಸ್ವತ್ತನ್ನು ಪ್ರತಿವಾದಿಗಳು ನಮ್ಮದು ಎಂದು ನಮ್ಮಲ್ಲಿ ಜಗಳ ತೆಗೆದಿರುತ್ತಾರೆ . ನಮ್ಮ ವಿರುದ್ಧ ಯಾವುದೇ ದಾವೆಯನ್ನು ಪ್ರತಿವಾದಿಗಳು ಹಾಕಿರುವುದಿಲ್ಲ. ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ . ಸದರಿ ಸ್ವತ್ತು ಪ್ರತಿವಾದಿಗಳ ಜಮೀನು ಸರ್ವೆ ನಂ 35/10 ರಲ್ಲಿ 15.5 ಗುಂಟೆಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮದು ಆಸ್ತಿಸಂಖ್ಯೆ 97 ಎಂದು ನುಡಿಯುತ್ತಾರೆ . ಪಂಚಾಯಿತಿಯಲ್ಲಿ ದಾವಾ ಸ್ವತ್ತು ಸಂಬಂಧಸಿದಂತಹ ದಾಖಲೆಗಳನ್ನು ಸೃಷ್ಟಿ ಮಾಡಿ ಪ್ರತಿವಾದಿಗಳ ಜಮೀನಿನ ಆಸ್ತಿಯೊಳಗೆ ಬರುತ್ತಿದ್ದೀರಾ ಎಂದು ಸೂಚಿಸಿದರೆ ಸರಿಯಲ್ಲ.

ನಾಗರಾಜಪ್ಪ , ಸುರೇಶ , ನಾಗೇಂದ್ರಪ್ಪ , ಮಹೇಶ , ಬಸವರಾಜಪ್ಪರವರು ನನ್ನ ಅಣ್ಣ , ತಮ್ಮಂದಿರು. ನಾಗೇಂದ್ರಪ್ಪ ನನ್ನ ದೊಡ್ಡಪ್ಪ . ದಿಃ 20-12-2014 ರಂದು ನನ್ನ ಅಣ್ಣ ತಮ್ಮಂದಿರ ಮತ್ತು ಪ್ರತಿವಾದಿಗಳ ಮಧ್ಯೆ ಜಮೀನಿನ ವಿಚಾರವಾಗಿ ಗಲಾಟೆಯಾಗಿತ್ತು ಎಂದರೆ ಆಗ ನಾನು ಇರಲಿಲ್ಲ ಎಂದು ನುಡಿಯುತ್ತಾರೆ .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೊರಿದ್ದು , ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.